# ಆಧುನಿಕ ಭಾರತದ ಸ್ತ್ರೀಶಕ್ತಿ

## ಸಂಪಾದಕೀಯ

ಆಧುನಿಕತೆಯ ಕುರುಹುಗಳೆಂದು ಪರಿಗಣಿತವಾಗಿರುವ ಮಾಹಿತಿತಂತ್ರಜ್ಞಾನದ ವಲಯಗಳಲ್ಲಿ ವೇಗವಾಗಿ ತನ್ನದೇ ಆದಂತಹ ಛಾಪನ್ನು ಮೂಡಿಸುತ್ತಿರುವ ನಮ್ಮ ಭಾರತದೇಶದ ಸಾಮಾಜಿಕ ಜೀವನ ಎಷ್ಟು ಸುಧಾರಿಸಿದೆ ಎಂಬುದು ಚರ್ಚಾಸ್ಪದ ವಿಷಯ. ಸುದ್ದಿ ಮಾಧ್ಯಮಗಳಲ್ಲಿ ಪ್ರತಿನಿತ್ಯವೂ ಕೇಳಿಬರುತ್ತಿರುವ ಸ್ತ್ರೀದೌರ್ಜನ್ಯ, ಶೋಷಣೆಗಳು ಸಮಾಜದ ಆರೋಗ್ಯ ಹಿತಕರವಾಗಿಲ್ಲವೆಂದೇ ಸಾರುತ್ತಿವೆ. ಒಂದೆಡೆ ದೊಡ್ಡ ಸಂಸ್ಥೆಗಳ ಉನ್ನತ ಹುದ್ದೆಗಳಲ್ಲಿ ಸ್ತ್ರೀಯರು ತಮ್ಮ ಸಾಮರ್ಥ್ಯವನ್ನು ಪ್ರದರ್ಶಿಸುತ್ತಿದ್ದರೆ ಮತ್ತೊಂದೆಡೆ ವರದಕ್ಷಿಣೆಗಾಗಿ ಕೊಲೆ, ಅತ್ಯಾಚಾರ ಇತ್ಯಾದಿಗಳು ನಡೆಯುತ್ತಿದ್ದು ನಾವು ನಾಚಿಕೆಯಿಂದ ತಲೆ ತಗ್ಗಿಸುವಂತೆ ಮಾಡುತ್ತಿವೆ. ಇದು ಕೇವಲ ಭಾರತದ ಸಮಸ್ಯೆಯಲ್ಲ. ಎಲ್ಲ ರಾಷ್ಟ್ರಗಳಲ್ಲೂ ಬೇರೆ ಬೇರೆ ರೀತಿಗಳಲ್ಲಿ ಕಂಡುಬರುತ್ತಿರುವ ಸಾಮಾನ್ಯ ಪಿಡುಗು—ಸ್ತ್ರೀಯರ ಶೋಷಣೆ. ಇದಕ್ಕೆ ಪರಿಹಾರ ವೇನು? ಸಮಾನ ಹಕ್ಕುಗಳನ್ನು ಪಡೆಯುವುದರಿಂದ ಸ್ತ್ರೀಯರ ಸಮಸ್ಯೆಗಳೆಲ್ಲ ಬಗೆಹರಿಯುವುವೇ? ಈ ವಿಚಾರಗಳ ಬಗ್ಗೆ ಅನೇಕ ಚರ್ಚೆಗಳು, ವಿಚಾರ ಸಂಕಿರಣಗಳು ನಡೆಯುತ್ತಿವೆ. ವಿಚಾರದ ವಲಯದಲ್ಲಿ ಹೊಸ ಚಿಂತನೆಗಳು ಮೊದಲು ಬೇರೂರಿ ಅನಂತರ ಕಾರ್ಯರೂಪದಲ್ಲಿ ವ್ಯಕ್ತವಾಗುವುವು. ಇದು ಆಶಾದಾಯಕವೇ ಆದರೂ ಸಮಸ್ಯೆಯನ್ನು ಎಲ್ಲ ಆಯಾಮಗಳಿಂದಲೂ ವೀಕ್ಷಿಸಿ, ಆತ್ಯಂತಿಕವೂ ಸಮಂಜಸವೂ ಆದ ಪರಿಹಾರವನ್ನು ಕಂಡುಹಿಡಿಯಬೇಕು. ಈ ಪರಿಹಾರದ ಬಗ್ಗೆ ಪುರುಷರು ಕುಳಿತು ಚರ್ಚಿಸಿದರೆ ಆಗದು. ಪುರುಷರ ನಿರ್ಧಾರಗಳನ್ನು ಪಾಲಿಸುವುದೇ ಸ್ತ್ರೀಯರ ಕರ್ತವ್ಯವೆಂಬ ಧೋರಣೆ ಬದಲಾಗಬೇಕಾಗಿದೆ. ಈ ದಿಸೆಯಲ್ಲಿ ಅನೇಕ ಪರಿಭಾವನೆಗಳನ್ನು ಸ್ವಾಮಿ ವಿವೇಕಾನಂದರು ಆಗಲೇ ನೀಡಿದ್ದರು: "ಸ್ತ್ರೀಯರಿಗೆ ಉತ್ತಮ ಶಿಕ್ಷಣ ಕೊಟ್ಟರೆ ಅವರೇ ತಮ್ಮ ಸಮಸ್ಯೆಗಳನ್ನು ನಿವಾರಿಸಿಕೊಳ್ಳುವರು... ಸ್ತ್ರೀಯರಿಗೆ ಅವರ ಸಮಸ್ಯೆಯನ್ನು ಅವರದೇ ರೀತಿಯಲ್ಲಿ ಬಗೆಹರಿಸಿಕೊಳ್ಳಲು ಬಿಡಿ. ಇತರರಾರೂ ಇದನ್ನು ಅವರಿಗಾಗಿ ಮಾಡಲಾರರು ಅಥವಾ ಮಾಡಲೂಬಾರದು."

ಭಾರತೀಯ ಪರಂಪರೆ ಸ್ತ್ರೀಯರಿಗೆ ಮಾತೃಸ್ಥಾನವನ್ನು ನೀಡಿ ದೇವಿಯೆಂದು ಆರಾಧಿಸಿದೆಯಾದರೂ ಅನೇಕ ಶತಮಾನಗಳ ಕಾಲ ಭಾರತೀಯ ನಾರಿಯು ವಿದ್ಯೆ ಹಾಗೂ ಎಲ್ಲ ರೀತಿಯ ಸ್ವಾತಂತ್ರ್ಯದಿಂದಲೂ ವಂಚಿತಳಾಗಿ ಕಣ್ಣೀರು ಸುರಿಸುತ್ತಿದ್ದಾಳೆ. ಇಂತಹ ಪರಿಸ್ಥಿತಿ ಹೇಗೆ ಬಂದಿತು, ಅದಕ್ಕೆ ಕಾರಣಗಳು ಏನು ಎಂದು ಅನೇಕ ಇತಿಹಾಸಜ್ಞರು ಸಂಶೋಧನೆ ನಡೆಸಿದ್ದಾರೆ. ಒಂದು ಸಮಾಜವನ್ನು ತಿಳಿಯಬೇಕಾದರೆ ಅದರಲ್ಲಿನ ವ್ಯಕ್ತಿಗಳ ಜೀವನ, ಸಂಸ್ಕೃತಿ ಹಾಗೂ ಆದರ್ಶಗಳನ್ನು ತಿಳಿಯಬೇಕಾಗುತ್ತದೆ. ಅವರೊಂದಿಗೆ ಒಂದಾಗಿ ಅವರ ದೃಷ್ಟಿಯಿಂದ ಎಲ್ಲವನ್ನೂ ನೋಡಿ ಪರಿಶೀಲಿಸಬೇಕಾಗುತ್ತದೆ. ಅವರ ಭಾವನಾತ್ಮಕ ಪ್ರಪಂಚವನ್ನು ಅರಿತಾಗ ಮಾತ್ರ ಅವರ ಕ್ರಿಯೆಗಳಿಗೆ, ನಡತೆಗೆ ಕಾರಣಗಳನ್ನು ಕಂಡುಕೊಳ್ಳಬಹುದು. ತುಲನಾತ್ಮಕವಾಗಿ ಬೇರೆ ಸಮಾಜಗಳನ್ನು ಪರಿಶೀಲಿಸುವಾಗ ನಮ್ಮ ಧೋರಣೆಗಳನ್ನು, ಭಾವನೆಗಳನ್ನು, ನಂಬಿಕೆಗಳನ್ನು ಬದಿಗಿಡಬೇಕಾಗುತ್ತದೆ. ಆಗ ಮಾತ್ರ ಪೂರ್ವಗ್ರಹ ಪೀಡಿತರಾಗದೆ ಆ ಸಮಾಜವನ್ನು ಬೆಸೆದಿರುವ ಮೂಲಸೂತ್ರವನ್ನು ಕಂಡುಕೊಳ್ಳಬಹುದು.

ಭಾರತದ ಇತಿಹಾಸವನ್ನು ಮೊದಲು ಬರೆದವರೆಲ್ಲ ಪಾಶ್ಚಾತ್ಯರು. ಮತಾಂತರದ ಉದ್ದೇಶದಿಂದ ಹಾಗೂ ತಮ್ಮ ಸಂಸ್ಕೃತಿಯೇ ಉತ್ತಮ ಎನ್ನುವ ಧೋರಣೆಯಿಂದ ಅವರ ಅಭಿಪ್ರಾಯಗಳು ಪೂರ್ವನಿರ್ಧಾರಿತವೆಂದು ಆಧುನಿಕ ಭಾರತೀಯ ಇತಿಹಾಸಜ್ಞರು ಹೇಳುತ್ತಿದ್ದಾರೆ. ಉತ್ತಮ ಆದರ್ಶಗಳನ್ನು ಸಮಾಜ ಹೊಂದಿದ್ದರೂ ಆಚರಣೆಯಲ್ಲಿ ಮಾನವನ ದೌರ್ಬಲ್ಯದಿಂದ ಅವು ಕಾರ್ಯರೂಪದಲ್ಲಿ ಸಂಪೂರ್ಣವಾಗಿ ವ್ಯಕ್ತವಾಗದೇ ಇರಬಹುದು. ಇದು ಆದರ್ಶದ ಲೋಪವಲ್ಲ. ವ್ಯಕ್ತಿಗಳ, ಪರಿಸ್ಥಿತಿಯ ಕುಂದುಕೊರತೆಗಳಿಂದ ಆದರ್ಶವು ಕಡೆಗಣಿಸಲ್ಪಟ್ಟಿದ್ದರೂ ಅದನ್ನು ಮರಳಿ ಪಡೆಯಲು ಸುಪ್ತ ಪ್ರಯತ್ನಗಳು ನಡೆಯುತ್ತಲೇ ಇರುತ್ತವೆ. ಹೀಗಿಲ್ಲದೇ ಹೋಗಿದ್ದರೆ ಯಾವುದೇ ಸಮಾಜ ಉತ್ತಮಿಕೆಯನ್ನು ಸಾಧಿಸಲು ಸಾಧ್ಯವಾಗುತ್ತಿರಲೇ ಇಲ್ಲ. ವ್ಯಕ್ತಿಗಿರುವಂತೆ ಏರಿಳಿತಗಳು ಸಮಾಜಕ್ಕೂ ಅನ್ವಯಿಸುತ್ತವೆ. ಪ್ರಗತಿಯೇ ಜೀವನದ ಗುರಿ. ವ್ಯಕ್ತಿಯಂತೆ ಪ್ರತಿಯೊಂದು ಸಮಾಜಕ್ಕೂ ತನ್ನದೇ ಆದ ಜೀವಸ್ವರವಿದೆ, ತುಡಿತವಿದೆ. ಆಂತರಿಕ ಹಾಗೂ ಬಾಹ್ಯ ಒತ್ತಡಗಳ ಪ್ರಭಾವದಿಂದ ಈ ಸ್ಪಂದನದ ಗತಿಯಲ್ಲಿ ವ್ಯತ್ಯಾಸವಾಗುತ್ತದೆ. ಆದರೆ ಸಮಸ್ಥಿತಿಗೆ ಬರುವ ಪ್ರಯತ್ನ ಸದಾ ನಡೆಯುತ್ತಲೇ ಇರುತ್ತದೆ. ಆದ್ದರಿಂದ ಇತಿಹಾಸವನ್ನು ಬರೆಯುವಾಗ, ಓದುವಾಗ ಆಯಾ ಸಮಾಜದ

ಅಂತರಂಗವನ್ನು ಪ್ರವೇಶಿಸಲು ಪ್ರಯತ್ನಿಸಬೇಕು. ಹೊರಗಿನ ಹೊಟ್ಟನ್ನು ನೋಡಿದರೆ ಒಳಗಿನ ಸತ್ವ ತಿಳಿಯುವುದಿಲ್ಲ. ಇದು ಕೇವಲ ಭಾರತಕ್ಕೆ ಮಾತ್ರ ಅನ್ವಯಿಸುವುದಿಲ್ಲ. ಯಾವುದೇ ಸಮಾಜ ಅಥವಾ ಸಂಸ್ಕೃತಿಯನ್ನು ಅಧ್ಯಯನ ಮಾಡುವಾಗಲೂ ನಾವು ಈ ಪರಿಕಲ್ಪನೆಯನ್ನು ನೆನಪಿಡಬೇಕು. ಇದು ಒಂದು ವೈಜ್ಞಾನಿಕವಾದ ಪದ್ಧತಿಯೂ ಹೌದು. ಹಿಂದೂಧರ್ಮ ಹಾಗೂ ಜನಾಂಗವನ್ನು ನಿಂದಿಸಿ, ಆಚರಣೆಗಳನ್ನೆಲ್ಲ ಖಂಡಿಸಿ ಅವುಗಳಲ್ಲಿ ಯಾವುದೇ ಮೌಲ್ಯವಿಲ್ಲ ಎಂದು ಹಳಿಯುವ ಸ್ವಭಾವ ಅನೇಕರದ್ದು. ಇದು ಪಾಶ್ಚಾತ್ಯ ಶಿಕ್ಷಣದ ಕೊಡುಗೆ ಎಂದರೆ ತಪ್ಪಾಗಲಾರದು. ಬಹುಶಃ ಪ್ರಪಂಚದ ಇನ್ಯಾವ ಜನಾಂಗವೂ ಇಷ್ಟೊಂದು ನಿಂದೆಯನ್ನು ಅನುಭವಿಸಿಲ್ಲ. ಆದರೂ ಅದರಲ್ಲಿನ ಸತ್ತ್ವ ಇನ್ನೂ ಜೀವಂತವಾಗಿದೆ. ಅನೇಕ ಒತ್ತಡಗಳನ್ನು ಎದುರಿಸಿರುವ ಹಿಂದೂಧರ್ಮ ತನ್ನ ಸ್ವಂತಿಕೆಯೊಂದಿಗೆ, ಆಧುನಿಕತೆಯನ್ನೂ ಸ್ವೀಕರಿಸುತ್ತಿದೆ. ಇಂತಹ ಉದಾರತೆಯೇ ಈ ಜನಾಂಗ ಹಾಗೂ ಧರ್ಮವನ್ನು ಜೀವಂತವಾಗಿ ಉಳಿಸಿದೆ.

ದೀರ್ಘಕಾಲದ ದಾಸ್ಯದಿಂದ ಉದ್ಭವಗೊಂಡ ಸಮಸ್ಯೆಗಳು ಭಾರತೀಯ ಸಮಾಜವನ್ನು ನಿಂತ ನೀರಾಗಿಸಿ ಜಡತೆಯನ್ನು ತಂದವು. ಮತ್ತೆ ಮತ್ತೆ ದಾಳಿ ಮಾಡಿದ ಭಿನ್ನ ಸಂಸ್ಕೃತಿಯ ಜನಾಂಗಗಳನ್ನು ಎದುರಿಸಲಾರದೆ ಬಸವನಹುಳುವಿನಂತೆ ತನ್ನದೇ ಚಿಪ್ಪಿನೊಳಗೆ ಮುದುಡಿಕೊಂಡಿತು. ಆರ್ಥಿಕ ಪರಿಸ್ಥಿತಿಯು ಹದಗೆಟ್ಟು ಧಾರ್ಮಿಕ ಮೌಲ್ಯಗಳು ದಾಸ್ಯದಿಂದಾಗಿ ಕುಸಿಯತೊಡಗಿ ಭಾರತೀಯ ನಾರಿಯರು ವಿದ್ಯಾಭ್ಯಾಸ ಹಾಗೂ ಸಾಮಾಜಿಕ ಸ್ಥಾನಮಾನಗಳಿಂದ ವಂಚಿತರಾಗಿದ್ದು ನಿಜವೇ ಆದರೂ ಮೂಲ ಸಂಸ್ಕೃತಿ ಅವರಿಂದಲೇ ಮುಂದಿನ ಪೀಳಿಗೆಗೆ ವರ್ಗಾವಣೆಗೊಂಡಿತು ಎಂಬುದೂ ಅಷ್ಟೇ ಸತ್ಯ. ಮಕ್ಕಳಿಗೆ ಮನೆಯಲ್ಲಿ ಧಾರ್ಮಿಕ ವಿಚಾರಗಳನ್ನು ಹೇಳುವುದರ ಮೂಲಕ, ನಾಡಿನ ಉತ್ತಮ ಸಂಸ್ಕೃತಿಯನ್ನು ತಿಳಿಸುವುದರ ಮೂಲಕ ಸ್ತ್ರೀಯರೇ ನಮ್ಮ ಅಂತಃಸತ್ತ್ವವನ್ನು ಜಾಗೃತಗೊಳಿಸಿದರು. ಶಿವಾಜಿಯ ತಾಯಿ ಜೀಜಾಬಾಯಿ, ನರೇಂದ್ರನ ತಾಯಿ ಭುವನೇಶ್ವರೀ ದೇವಿ ಇವರಂತಹ ಅನೇಕ ಮಹಿಳೆಯರು, ವಂಶವಾಹಿನಿಗಳು ಜೀವನವನ್ನು ರೂಪಿಸುವಲ್ಲಿ ವಹಿಸುವ ಪ್ರಮುಖ ಪಾತ್ರದಂತೆ, ದೇಶದ ಸಂಸ್ಕೃತಿಯ ಪ್ರಸಾರಕರಾಗಿದ್ದಾರೆ.

ಸೆಮೆಟಿಕ್ ಧರ್ಮಗಳೆಂದು ಕರೆಯಲ್ಪಡುವ ಕ್ರೈಸ್ತ ಮತ್ತು ಇಸ್ಲಾಂ ಧರ್ಮಗಳಲ್ಲಿ ಇರುವ ನಂಬಿಕೆಯಂತೆ – ಸ್ತ್ರೀಯರಿಗೆ ಆತ್ಮವೇ ಇಲ್ಲ. ಪುರುಷನ ಒಂದು ಎಲುಬಿನಿಂದ ಸ್ತ್ರೀ ತಯಾರಾದಳು ಮತ್ತು ದೇವರಿಂದ ಅವನನ್ನು ದೂರ ಮಾಡಿದಳು ಎಂದು ಅನೇಕ ಕೆಲವು ಧರ್ಮಗ್ರಂಥಗಳು ಸಾರುತ್ತವೆ. ಧಾರ್ಮಿಕ ಜೀವನಕ್ಕೆ ಸ್ತ್ರೀ ಅಡಚಣೆಯೆಂದೇ ಅವರ ನಂಬಿಕೆ. ಏಸುಕ್ರಿಸ್ತನಿಗೆ ಅನೇಕ ಸ್ತ್ರೀ ಅನುಯಾಯಿಗಳಿದ್ದರು. ಕ್ರೈಸ್ತ ಮತದಲ್ಲಿ ಅನೇಕ ಮಹಿಳಾ ಸಂತರು ಅನಂತರದ ದಿನಗಳಲ್ಲಿ ಪ್ರಸಿದ್ಧರಾದರು. ಆದರೂ ಮಧ್ಯಯುಗದಲ್ಲಿ ಯೂರೋಪ್ ಖಂಡದಲ್ಲೇ ಸಾವಿರಾರು ಹೆಂಗಸರನ್ನು ಮಾಟಗಾತಿಯರೆಂದು ಆರೋಪಿಸಿ ಜೀವಂತವಾಗಿ ದಹಿಸಲಾಗುತ್ತಿತ್ತು. ಅನೇಕ ಕಡೆಗಳಲ್ಲಿ ಸ್ತ್ರೀಯರಿಗೆ ದೇವಸ್ಥಾನಗಳಲ್ಲಿ ಪ್ರವೇಶವಿರಲಿಲ್ಲ. ಹದಿನೆಂಟನೆಯ ಶತಮಾನದ ತನಕ ಸ್ತ್ರೀಯರಿಗೆ ಶಿಕ್ಷಣ ಸಿಗುತ್ತಿರಲಿಲ್ಲ, ಆಡಳಿತದಲ್ಲಿ ಸ್ಥಾನ ಇರಲಿಲ್ಲ. ಇಸ್ಲಾಂ ಧರ್ಮವೇ ಪ್ರಧಾನವಾಗಿರುವ ಅನೇಕ ದೇಶಗಳಲ್ಲಿ ಇಂದಿಗೂ ಸ್ತ್ರೀಯರಿಗೆ ಸಾಮಾನ್ಯ ಮೂಲಭೂತ ಹಕ್ಕುಗಳೂ ಲಭ್ಯವಿಲ್ಲ. ಎಲ್ಲೆಡೆ ಇಂತಹ ಪರಿಸ್ಥಿತಿ ಇದ್ದಾಗ ಭಾರತದಲ್ಲಿಯೂ ಸ್ತ್ರೀಯರು ಹಿಂದುಳಿದರು. ಇತಿಹಾಸಜ್ಞರು ಇದನ್ನೆಲ್ಲ ಸ್ಪಷ್ಟವಾಗಿ ದಾಖಲಿಸಿದ್ದಾರೆ. ಘೋಷಾ ಪದ್ಧತಿಯೇ ಮೊದಲಾದ ಆಚರಣೆಗಳು ಪರಧರ್ಮಗಳಿಂದ ಬಂದವು. ಅಧಿಕಾರದೊಂದಿಗೆ ಧಾರ್ಮಿಕ ನಂಬಿಕೆಗಳನ್ನು ರೂಪಿಸುವಲ್ಲಿ ಪುರುಷರೇ ಪ್ರಧಾನ ಪಾತ್ರ ವಹಿಸಲು ಪ್ರಾರಂಭಿಸಿದಾಗ ಸ್ತ್ರೀಯರನ್ನು ನಿರ್ಲಕ್ಷಿಸಲಾಯಿತು. ಇದು ಎಲ್ಲ ಸಮಾಜಗಳಲ್ಲೂ ಕಂಡುಬರುತ್ತದೆ.

ಪ್ರಾಚೀನ ಭಾರತದಲ್ಲಿ ಸ್ತ್ರೀಯರಿಗೆ ಪ್ರಾಶಸ್ತ್ಯವಿತ್ತು. ಆರ್ಯ ಪರಂಪರೆಯಲ್ಲಿ ಪುರುಷನಿಗೆ ಸರಿಸಮಾನವಾದ ಅಂತಸ್ತನ್ನೇ ಸ್ತ್ರೀಯರಿಗೂ ನೀಡಿದ್ದರು. ವೇದ ಮತ್ತು ಉಪನಿಷತ್ತುಗಳಲ್ಲಿ ಸ್ತ್ರೀಯರು ಶ್ರೇಷ್ಠತಮ ಸತ್ಯಗಳನ್ನು ಬೋಧಿಸಿದರು. ಪುರುಷರಂತೆಯೇ ಗೌರವವನ್ನೂ ಗಳಿಸಿದರು. ಯಜ್ಞಯಾಗಾದಿಗಳಲ್ಲಿ ಭಾಗವಹಿಸುವ ಹಕ್ಕು ಸ್ತ್ರೀಯರಿಗೂ ಇತ್ತು. ಋತ್ವಿಕರು ಪತ್ನೀಸಮೇತರಾಗಿಯೇ ಕ್ರಿಯೆಗಳನ್ನು ಮಾಡಬೇಕಿತ್ತು. ಪುರುಷರಂತೆ ಸ್ತ್ರೀಯರಿಗೆ ಎಲ್ಲ ಸಂಸ್ಕಾರಗಳನ್ನೂ ಗೃಹ್ಯಸೂತ್ರಗಳು ವಿಧಿಸುತ್ತವೆ. ಪತಿಯು ಊರಿನಲ್ಲಿ ಇಲ್ಲದೇ ಇರುವಾಗ ಸ್ತ್ರೀಯರೇ ಅಗ್ನಿಯನ್ನು ರಕ್ಷಿಸಿ, ನಿತ್ಯಕರ್ಮಗಳನ್ನು ಮಾಡುತ್ತಿದ್ದರು. ಇದಕ್ಕಿಂತ ಮುಖ್ಯವಾಗಿ ಅನೇಕ ಸ್ತ್ರೀಯರನ್ನು ಋಷಿಗಳು ಅಥವಾ ದ್ರಷ್ಟಾರರು—ಮಂತ್ರಗಳನ್ನು ಅನುಭವದಿಂದ ಕಂಡುಕೊಳ್ಳುವವರು—ಎಂದು ಋಕ್‌ಸಂಹಿತೆಯಂತಹ ಅತ್ಯಂತ ಪ್ರಾಚೀನ ಕಾಲದ ಗ್ರಂಥದಿಂದ ತಿಳಿಯಬಹುದಾಗಿದೆ. ಸರ್ವಾನುಕ್ರಮಣಿಕಾ ಎಂಬ ಗ್ರಂಥದಲ್ಲಿ ಮಂತ್ರಗಳನ್ನು ರಚಿಸಿರುವ ಇಪ್ಪತ್ತು ಸ್ತ್ರೀಯರ ಉಲ್ಲೇಖವಿದೆ. ಲೋಪಾಮುದ್ರಾ, ಅಪಾಲಾ, ವಿಶ್ವವಾರಾ, ಸಿಕತಾ, ನಿನಾವರೀ, ಘೋಷಾ ಮುಂತಾದ ಸ್ತ್ರೀಯರು ಸಂಹಿತಾ ಭಾಗಗಳನ್ನು ರಚಿಸಿದ್ದಾರೆ.

ಇದರಿಂದ ಪ್ರಾಚೀನ ಕಾಲದಲ್ಲಿ ಸ್ತ್ರೀಯರಿಗೆ ವಿದ್ಯಾಭ್ಯಾಸ, ಉಪನಯನಾದಿ ಎಲ್ಲ ಸಂಸ್ಕಾರಗಳೂ ಲಭ್ಯವಿದ್ದವು ಎಂಬುದು ತಿಳಿದುಬರುತ್ತದೆ. ಅಥರ್ವ ಸಂಹಿತೆಯಲ್ಲಿ (೧೧.೫.೧೮), ಮದುವೆಯಾಗುವ ಮುನ್ನ ಕನ್ಯೆಯು ವೇದಗಳನ್ನು ಅಧ್ಯಯನ ಮಾಡಬೇಕೆಂದಿದೆ. ಮದುವೆಯ ತನಕ ಅಧ್ಯಯನದಲ್ಲಿ ತೊಡಗಿದ್ದವರನ್ನು ಸದ್ಯೋದ್ವಾಹರೆಂದೂ, ತಮ್ಮ ಇಡೀ ಜೀವನವನ್ನೇ ಅಧ್ಯಯನಕ್ಕಾಗಿ ಮೀಸಲಿಟ್ಟು, ವಿವಾಹವಾಗದೆ ಉಳಿಯುವವರನ್ನು ಬ್ರಹ್ಮವಾದಿನಿಯರೆಂದೂ ಕರೆಯಲಾಗುತ್ತಿತ್ತು. ಗಾರ್ಗಿ ವಾಚಕ್ನವೀ, ವಡವಾ ಪ್ರಾತೀಥೇಯೀ, ಸುಲಭಾ ಮೈತ್ರೇಯೀ ಮುಂತಾದವರೆಲ್ಲ ಬ್ರಹ್ಮವಾದಿನಿಯರಾಗಿದ್ದರು. ಇವರುಗಳಿಗೆ ನಮಸ್ಕರಿಸಿ ಅನಂತರವೇ ಬ್ರಹ್ಮಯಜ್ಞಾದಿ ಕ್ರಿಯೆಗಳನ್ನು ಮಾಡಲಾಗುತ್ತಿತ್ತು (ಆಶ್ವಲಾಯನ ಗೃಹ್ಯಸೂತ್ರ, ೩.೪.೪). ಇಂತಹ ವಿದ್ಯಾವಂತ ಮಹಿಳೆಯರು ಪುರುಷರಿಗೆ ಸರಿಸಮವಾಗಿ ವಾಗ್ವಾದಗಳಲ್ಲಿ ತೊಡಗುತ್ತಿದ್ದು ಸಮಾಜ ಇವರನ್ನು ಬಹಳ ಗೌರವದಿಂದ ಕಾಣುತ್ತಿತ್ತು. ಆದರೆ ಇದು ಕೇವಲ ಉಚ್ಚ ವರ್ಗದವರಿಗೆ ಮಾತ್ರ ಸೀಮಿತವಾಗಿತ್ತೇ ಎನ್ನುವುದರ ಬಗ್ಗೆ ಸಂದೇಹವಿದೆ. ಒಂದಂತೂ ನಿಶ್ಚಿತ—ಇತರ ದೇಶಗಳಲ್ಲಿ ಸ್ತ್ರೀಯರನ್ನು ಕೇವಲ ಮಕ್ಕಳನ್ನು ಹೆರುವ ಯಂತ್ರಗಳೆಂದೇ ಪರಿಗಣಿಸುತ್ತಿದ್ದ ಕಾಲದಲ್ಲಿ ಭಾರತೀಯ ಸಮಾಜ ಸ್ತ್ರೀಯರಿಗೆ ಅತ್ಯುತ್ತಮ ಗೌರವವನ್ನು ನೀಡುತ್ತಿತ್ತು.

ಹೆಣ್ಣುಮಕ್ಕಳಿಗೆ ಮನೆಯಲ್ಲೇ ವಿದ್ಯಾಭ್ಯಾಸದ ವ್ಯವಸ್ಥೆಯಿರುತ್ತಿತ್ತು ಎಂದು ಮಹಾಭಾರತ ಹಾಗೂ ರಾಮಾಯಣಗಳಿಂದ ತಿಳಿದುಬರುತ್ತದೆ. ಮಹಾಭಾರತದಲ್ಲಿ ಸತ್ಯವತಿಯು ಭೀಷ್ಮನಿಂದ ಎಲ್ಲ ಶಾಸ್ತ್ರಗಳನ್ನೂ ಕೇಳಿ ತಿಳಿದುಕೊಳ್ಳುತ್ತಾಳೆ; ರಾಜ್ಯದ ಆಡಳಿತದಲ್ಲಿಯೂ ಸಕ್ರಿಯವಾಗಿ ಭಾಗವಹಿಸುತ್ತಿದ್ದ ಗಾಂಧಾರಿ, ತಾರಾ ಇದ್ದಾರೆ. ರಾಮಾಯಣದ ಅರಣ್ಯಪರ್ವದಲ್ಲಿ (೯.೧೦) ಸೀತೆ ಕ್ಷತ್ರಿಯಧರ್ಮವನ್ನು ಕುರಿತು ರಾಮನೊಡನೆ ಚರ್ಚಿಸುತ್ತಾಳೆ. ರಾಮಾಯಣದ ಕಾಲದಲ್ಲಿಯೇ ಏಕಪತ್ನೀ ಪದ್ಧತಿಯು ಪ್ರಾಶಸ್ತ್ಯವನ್ನು ಪಡೆಯುತ್ತಿದ್ದುದು ಕಂಡುಬರುವುದರಿಂದ ಸ್ತ್ರೀಯರಿಗೆ ಸಾಮಾಜಿಕ ರಕ್ಷಣೆಯೂ ದೊರೆಯುತ್ತಿತ್ತು ಎಂಬುದು ತಿಳಿದುಬರುತ್ತದೆ. ಪರಸ್ತ್ರೀಯನ್ನು ಅಪಹರಿಸುವುದು ಪಾಪವೆಂಬ ಉಪದೇಶವನ್ನು ರಾವಣ ಎಲ್ಲರಿಂದಲೂ ಕೇಳುತ್ತಾನೆ. ಆದರ್ಶಗಳು, ಮೌಲ್ಯಗಳು ಪಾಲಿಸಲ್ಪಡದೇ ಇದ್ದಾಗ ಯುದ್ಧ, ಪ್ರತಿಭಟನೆಗಳು ನಡೆದು, ಆದರ್ಶಗಳು ಮತ್ತೆ ಸ್ಥಾಪಿತವಾಗುತ್ತಿದ್ದವು ಎಂಬುದು ಇದರಿಂದ ತಿಳಿದುಬರುತ್ತದೆ. ಎಲ್ಲ ದೇಶಗಳ, ಜನಾಂಗಗಳ ಇತಿಹಾಸವನ್ನು ಅಧ್ಯಯನ ಮಾಡಿದ್ದ ಸ್ವಾಮಿ ವಿವೇಕಾನಂದರು ಹೇಳುತ್ತಾರೆ, " ಜನಕನ ಆಸ್ಥಾನದಲ್ಲಿ ಯಾಜ್ಞವಲ್ಕ್ಯನನ್ನು ಹೇಗೆ ಪ್ರಶ್ನಿಸಿದರು, ನಿಮಗೆ ನೆನಪಿದೆಯೇ? ಅವನ ಮುಖ್ಯ ಪರೀಕ್ಷಕಳೇ ಬ್ರಹ್ಮವಾದಿನಿ ಎಂದು ಪ್ರಖ್ಯಾತಳಾದ ವಾಕ್‌ಚತುರೆ ಕುಮಾರಿ ವಾಚಕ್ನವಿ. ಜಾಣನಾದ ಬಿಲ್ಲುಗಾರನ ಕೈಯಲ್ಲಿರುವ ಎರಡು ಬಾಣಗಳಂತಿವೆ ನನ್ನ ಪ್ರಶ್ನೆಗಳು ಎನ್ನುತ್ತಾಳೆ ಆಕೆ. ಹಿಂದೆ ನಮ್ಮ ಅರಣ್ಯದ ಗುರುಕುಲಗಳಲ್ಲಿ ಬಾಲಕ ಬಾಲಿಕೆಯರಿಗೆ ಇದ್ದ ಸರಿಸಮಾನತೆಗಿಂತ ಮಿಗಿಲಾದುದಿದೆಯೇ? ನಮ್ಮ ಸಂಸ್ಕೃತ ನಾಟಕಗಳನ್ನು ಓದಿ. ಶಕುಂತಲೆಯ ಕಥೆಯನ್ನು ಓದಿ. ಟೆನಿಸನ್ ಕವಿಯ 'ಪ್ರಿನ್ಸೆಸ್' ನಮಗೆ ಏನಾದರೂ ಹೊಸದಾಗಿ ಕಲಿಸುವುದಿದೆಯೆ ನೋಡಿ" (ಸ್ವಾಮಿ ವಿವೇಕಾನಂದರ ಬೋಧನೆಯ ಸಾರ, ಪು.೧೪೯).

ಆಧುನಿಕ ಸ್ತ್ರೀ ಸಮಾನ ಹಕ್ಕುಗಳಿಗಾಗಿ ಹೋರಾಡುತ್ತಿದ್ದಾಳೆ. ಕೆಲಸದ ಕ್ಷೇತ್ರದಲ್ಲಿ, ಆಡಳಿತ ವಲಯದಲ್ಲಿ ಎಲ್ಲೆಡೆ ತನಗೆ ಸ್ಥಾನವಿರಬೇಕು ಎಂದು ಆಧುನಿಕ ಮಹಿಳೆ ಹೇಳುತ್ತಿದ್ದರೆ, ಅದನ್ನು ತಪ್ಪೆಂದು ಪರಿಗಣಿಸಲಾಗದು. ವಿದೇಶದಲ್ಲಿ ಸ್ತ್ರೀಯರ ಸಾಮರ್ಥ್ಯವನ್ನು ಕಂಡು ಆಶ್ಚರ್ಯಪಟ್ಟ ವಿವೇಕಾನಂದರು ಎಲ್ಲ ಭಾರತೀಯ ಸ್ತ್ರೀಯರಿಗೂ ವಿದ್ಯೆ ದೊರೆತರೆ ಅವರೇ ತಮ್ಮ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳುವರು ಎಂದು ತಿಳಿದಿದ್ದರು. ಕೇವಲ ಸಮಾನ ಸ್ಥಾನವನ್ನು ನೀಡುವುದರ ಮೂಲಕ ಎಲ್ಲ ಸಮಸ್ಯೆಗಳೂ ಬಗೆಹರಿಯುವುದಿಲ್ಲ ಎಂಬುದೂ ಅವರಿಗೆ ತಿಳಿದಿತ್ತು. ಸ್ತ್ರೀಯರಿಗೆ ವಿಶೇಷವಾದ ಸಹನೆ, ಲಜ್ಜೆಯಂತಹ ಗುಣಗಳು ಕೂಡ ಪರಿಪೂರ್ಣವಾಗಿ ವ್ಯಕ್ತವಾದಾಗ ಮಾತ್ರ ಅವರ ಸ್ವಂತಿಕೆ ಉಳಿಯುತ್ತದೆ. ಪ್ರಕೃತಿಯು ಸ್ತ್ರೀಯರಿಗೆ ವಿಶೇಷ ಕಾರ್ಯವನ್ನು ವಹಿಸಿದೆ. ಅದನ್ನು ನಿರ್ವಹಿಸುವಲ್ಲಿಯೂ ಅವಳು ಸ್ವತಂತ್ರಳಾಗಿರಬೇಕು.

ಸ್ತ್ರೀಯರನ್ನು ಪುರುಷರನ್ನಾಗಿಸುವುದಾಗಲೀ ಅಥವಾ ಪುರುಷರು ಸ್ತ್ರೀಯರಂತೆ ವರ್ತಿಸುವುದಾಗಲೀ ಸಮಸ್ಯೆಗೆ ಪರಿಹಾರವಲ್ಲ. "ಈ ಸಮಾನತೆಯ ಗೀಳು, ನಿಜವಾದ ವ್ಯತ್ಯಾಸಗಳನ್ನು ಅರಿಯುವ ದಿಕ್ಕಿನಲ್ಲಿ ನಮ್ಮನ್ನು ಕುರುಡುಗೊಳಿಸಕೂಡದು. 'ಶಾರೀರಿಕ ಮತ್ತು ಭೌತಿಕವಾದ ವ್ಯತ್ಯಾಸಗಳಿದ್ದರೂ ಕೂಡ' ಹೆಣ್ಣು, ಗಂಡಿನ ಸಾಮರ್ಥ್ಯಕ್ಕೆ ಅಳವಡಬಹುದಾದ್ದನ್ನೆಲ್ಲಾ ತಾನೂ ಮಾಡಬಲ್ಲಳು ಎನ್ನುವುದು ಪ್ರಶ್ನಾರ್ಹವಾಗುತ್ತದೆ. ಶಾರೀರಿಕ ಮತ್ತು ಭೌತಿಕ ವ್ಯತ್ಯಾಸಗಳಿಂದಾಗಿ ಹೆಣ್ಣು ಹೆಣ್ಣೇ ಆಗಿದ್ದಾಳೆ. ಇವುಗಳಿಲ್ಲದಿದ್ದಲ್ಲಿ ಆಕೆ ಗಂಡೇ ಆಗಿರುತ್ತಿದ್ದಳು ಮತ್ತು 'ಸಮಾನತೆ' ಯ ಸಮಸ್ಯೆಯು ತಂತಾನೇ ಪರಿಹಾರವಾಗುತ್ತಿತ್ತು.... ಹೆಣ್ಣು ಗಂಡಿಗಿಂತ ಬೇರೆಯೇ ಆಗಿದ್ದಾಳೆ. ವ್ಯತ್ಯಾಸಾತ್ಮಕ ನಡೆವಳಿಕೆಯು ಕೂಡ ಆಗ ತಾರ್ಕಿಕ ಪರಿಣಾಮವಾಗುತ್ತದೆ. ಹೆಣ್ಣಿಗೆ ಸಂಬಂಧಿಸಿದ ಈ ಭಿನ್ನತೆಯ ಭಾವವು ಯಾವ ಬಗೆಯಲ್ಲಿ ರಾಜಕೀಯ ಮತ್ತು ಕಾನೂನು ಸಂಹಿತೆಗಳಲ್ಲಿ ಪ್ರತಿಫಲನಗೊಂಡಿದೆ ಎಂಬುದು

ಸಂಪೂರ್ಣವಾಗಿ ಬೇರೆಯಾದ ಪ್ರಶ್ನೆಯಾಗಿದೆ; ಆದರೆ ಮೂಲಭೂತ ಸಂಗತಿ ಮಾತ್ರ ತಳ್ಳಿಹಾಕುವಂಥದ್ದಲ್ಲ" (ಕಿಷನ್ ಪಟ್ನಾಯಕ್. ವಿಚಾರ ಸಾಹಿತ್ಯ. ಬೆಂಗಳೂರು ವಿಶ್ವವಿದ್ಯಾನಿಲಯ p 101).

ಭಿನ್ನತೆಯಲ್ಲೂ ವೈಶಿಷ್ಟ್ಯವಿದೆ ಎಂಬುದನ್ನು ಗುರುತಿಸುವುದು ಬಹಳ ಮುಖ್ಯ. ನಮ್ಮ ಸಂಸ್ಕೃತಿ ಈ ದೇಶದ ಆದರ್ಶಗಳೊಂದಿಗೆ ಪ್ರಗತಿಯನ್ನು ಸಾಧಿಸಬೇಕಾದರೆ ಅದು ಪಾಶ್ಚಾತ್ಯರ ಅನುಕರಣೆಯಿಂದಲ್ಲ. ಭಗಿನಿ ನಿವೇದಿತಾ ಅವರ ಈ ಮಾತುಗಳು ಗಮನಾರ್ಹ: "ಸೀತಾ, ಸಾವಿತ್ರಿ, ರಾಣಿ ಅಹಲ್ಯಾಬಾಯಿಯಂತಹವರ ರೀತಿಯಲ್ಲಿ ಶತಮಾನಗಳ ಕಾಲದಿಂದಲೂ ರೂಪುಗೊಂಡಿರುವ ಭಾರತೀಯ ಸ್ತ್ರೀಯನ್ನು ಬೇಡಗುಗಾತಿಯರ, ವಿವಾಹ ವಿಚ್ಛೇದಿತರ ಮಟ್ಟಕ್ಕೆ ಇಳಿಸಬೇಕೇ? ಭಾರತದ ಪದ್ಮಿನಿ, ಗ್ರೀಸಿನ ಹೆಲೆನ್ನಳಾಗಿ ಬದಲಾಗಬೇಕೆ? ಬದಲಾವಣೆ ಆವಶ್ಯಕ—ಆದರೆ ಹೊಸ ವಿದ್ಯೆ, ಹಳೆಯ ಗಾಂಭೀರ್ಯ ಮತ್ತು ತಿಳುವಳಿಕೆಗೆ ಪೂರಕವಾಗಿರಬೇಕು. ಪಾವಿತ್ರ್ಯ ಕ್ಷೀಣಿಸಬಾರದು. ಹೆಚ್ಚಿನ ಜವಾಬ್ದಾರಿ ಪವಿತ್ರರನ್ನು ಹೆಚ್ಚು ಪವಿತ್ರರನ್ನಾಗಿಸಬೇಕು. ವಿದ್ಯೆಯಲ್ಲಿ ಪಾರಂಗತರಾಗುವುದರ ಮೂಲಕ ಹೊಸದಾದ ಮತ್ತು ಹಿರಿದಾದ ಕೋಮಲತೆಗೆ ಭಾರತೀಯ ನಾರಿ ನಾಂದಿಯಾಗಬೇಕು."

ಮನೆಯಲ್ಲಿನ ಜೀವನವು ಸಮಾಜ ಹಾಗೂ ರಾಷ್ಟ್ರದ ಆದರ್ಶಗಳಿಗೆ ಭಿನ್ನವಾದರೆ ಅದರಿಂದ ವೈಯಕ್ತಿಕ ಹಾಗೂ ಸಾಮಾಜಿಕ ಸಮಸ್ಯೆಗಳು ಬೆಳೆಯುತ್ತವೆ. ಪ್ರತಿಯೊಬ್ಬ ವ್ಯಕ್ತಿಯೂ ಈ ಎರಡೂ ಆಯಾಮಗಳನ್ನು ಸಾಮರಸ್ಯದಿಂದ ಕಾಪಾಡಿಕೊಳ್ಳಬೇಕು. **ಗೃಹಿಣೀ ಗೃಹಮುಚ್ಯತೇ** ಎಂಬ ಪ್ರಸಿದ್ಧ ಹೇಳಿಕೆಯಂತೆ ಸ್ತ್ರೀ ಮನೆಯ ಒಡತಿ. ತಾಯಿಯಾಗಿ ಪ್ರೀತಿ, ಸಹನೆಗಳಿಂದ ಮಕ್ಕಳ ಜೀವನವನ್ನು ರೂಪಿಸುವ ಹಿರಿಯ ಜವಾಬ್ದಾರಿ ಅವಳದು. ಈ ಅಂಶಗಳನ್ನು ಅಲ್ಲಗಳೆಯಬಾರದು ಎಂಬುದನ್ನು ಅಖಿಲ ಭಾರತ ಶಿಕ್ಷಣ ಸಮ್ಮೇಳನದ ಮಹಿಳಾ ವಿಭಾಗದಲ್ಲಿ ಮಾತನಾಡಿದ ಶ್ರೀಮತಿ ಯಮುನಾಬಾಯಿ ಹಿರ್ಲೇಕರ್ ಅವರು ಸ್ಪಷ್ಟಪಡಿಸುತ್ತಾರೆ: "ಭಗವಂತನಿಂದ ಬೇರೆ ಬೇರೆಯಾಗಿ ಸೃಷ್ಟಿಗೊಂಡಿರುವವರ ಜೀವನದಲ್ಲಿ, ಬೇರೆ ಬೇರೆ ಕರ್ತವ್ಯಗಳನ್ನು ಹೊಂದಿರುವವರ ನಡುವೆ, ಸಮಾನತೆಯ ಪ್ರಶ್ನೆ ಹೇಗೆ ತಾನೇ ಸಾಧ್ಯ? ಉತ್ತಮವಾದ ಒಮ್ಮನಸ್ಸು ಇದ್ದರೆ, ಗಂಡಹೆಂಡತಿಯರ ನಡುವೆ ಆರ್ಥಿಕ ಸ್ವಾತಂತ್ರ್ಯದ ಪ್ರಶ್ನೆ ಏಳಲಾರದು. ಈಗ ನಮಗೆ ಬೇಕಾಗಿರುವುದು ನೋಡುವ ದೃಷ್ಟಿಯಲ್ಲಿ ಆಮೂಲಾಗ್ರ ಬದಲಾವಣೆ ಹಾಗೂ ಜೀವನ ಮತ್ತು ಅದರ ಕ್ರಿಯೆಗಳ ಬಗ್ಗೆ ಸ್ಪಷ್ಟ ಕಲ್ಪನೆಯನ್ನು ನೀಡುವ ಶಿಕ್ಷಣದ ವ್ಯವಸ್ಥೆ—ಯಾವುದರ ಮೂಲಕ ಸ್ತ್ರೀ ಹೆಚ್ಚು ಮಾರ್ದವತೆಯನ್ನು ಹೊಂದುತ್ತಾಳೋ ಅದು. ಪುರುಷರಿಗೆ ಮತ್ತು ಸ್ತ್ರೀಯರಿಗೆ ಜೀವನದಲ್ಲಿ ತಮ್ಮದೇ ಆದಂತಹ ವಿಶೇಷ ಕಾರ್ಯಗಳಿವೆ. ಒಬ್ಬರಿಗೊಬ್ಬರು ಸಹಾಯಕರಾಗಿದ್ದುಕೊಂಡು ಸಾಮರಸ್ಯವನ್ನು ಕಂಡುಕೊಳ್ಳುವಂತಾಗಬೇಕು. ಪಾಶ್ಚಾತ್ಯರನ್ನು ಕಾಡುತ್ತಿರುವ ಅತ್ಯಂತ ಗಂಭೀರವಾದ ಸಮಸ್ಯೆಯೆಂದರೆ ಭಗ್ನ ಕುಟುಂಬಗಳು. ಇತ್ತೀಚೆಗೆ ನಮ್ಮನ್ನೂ ಕೂಡ ಈ ಸಮಸ್ಯೆ ಕಾಡಲಾರಂಭಿಸಿದೆ. ಸೇವೆ ಮತ್ತು ತ್ಯಾಗಗಳ ಅತ್ಯುತ್ತಮವಾದ ಆದರ್ಶವನ್ನು ಮರೆತು ಪಾಶ್ಚಾತ್ಯರ ಜೀವನದಂತೆ ವೈಯಕ್ತಿಕ ಸುಖಕ್ಕೆ ನಾವು ಬಲಿಯಾಗುತ್ತಿರುವುದೇ ಇದಕ್ಕೆ ಕಾರಣ. ಶಿಸ್ತು, ಸಂಯಮ ಮತ್ತು ತಪಸ್ಸುಗಳ ಕಠಿಣ ಮಾರ್ಗದ ಮೂಲಕವೇ ನೈಜವಾದ ಮತ್ತು ಶಾಶ್ವತವಾದ ಆನಂದವನ್ನು ನಾವು ಪಡೆಯಲು ಸಾಧ್ಯ."

ಮಹಾಭಾರತದಲ್ಲಿ ದ್ರೌಪದಿಯು ಅನುಭವಿಸುವ ಕಷ್ಟಗಳನ್ನು ಯಾವುದೇ ಸ್ತ್ರೀ ಬಯಸಲಾರಳು. ಅಂತಹ ಕಷ್ಟಗಳ ನಡುವೆಯೂ ಅವಳು ತೋರಿದ ಛಲ ಮತ್ತು ಧೀರತನಗಳು ಪುರುಷರಲ್ಲಿಯೂ ವಿರಳ. ಮಹಾಭಾರತದಲ್ಲಿ ಒಂದು ಪ್ರಸಂಗವಿದೆ. ಅನೇಕ ಕಷ್ಟ ಪರಿಸ್ಥಿತಿಗಳ ನಡುವೆಯೂ ಸದಾ ಹಸನ್ಮುಖಿಯಾಗಿರುತ್ತಿದ್ದ ದ್ರೌಪದಿಯನ್ನು ಕಂಡು ಶ್ರೀಕೃಷ್ಣನ ಪತ್ನಿ ಸತ್ಯಭಾಮೆಯು ಅದು ಹೇಗೆ ಸಾಧ್ಯವೆಂದು ಅಚ್ಚರಿಯಿಂದ ಪ್ರಶ್ನಿಸುತ್ತಾಳೆ. ಅದಕ್ಕೆ ಉತ್ತರವಾಗಿ ದ್ರೌಪದಿ ಹೇಳುವ ಮಾತುಗಳು ಇಡೀ ಭಾರತೀಯ ನಾರಿಯರ ಪರವಾಗಿ ಅವಳು ನುಡಿಯುತ್ತಿರುವಂತಿದೆ: —**ಸುಖಂ ಸುಖೇನೇಹ ನ ಜಾತು ಲಭ್ಯಮ್, ದುಃಖೇನ ಸಾಧ್ವೀ ಲಭತೇ ಸುಖಮ್**— ತಾಯಿ, ಸುಖವನ್ನು ಅರಸುವುದರಿಂದ ಅದು ದೊರೆಯುವುದಿಲ್ಲ. ದುಃಖದ ಮೂಲಕವೇ ಅದು ದೊರೆಯುತ್ತದೆ. ತ್ಯಾಗ, ನಿಃಸ್ವಾರ್ಥತೆ, ಸೇವೆಗಳನ್ನು ಅನುಸರಿಸಿದರೆ ದುಃಖದಲ್ಲೂ ಸುಖವೇ ಕಂಡುಬರುತ್ತದೆ. ಸೀತೆ, ಸಾವಿತ್ರಿ, ದಮಯಂತಿ, ಶಕುಂತಲೆ, ಮಹಾಶ್ವೇತೆ ಮುಂತಾದವರ ಜೀವನವೆಲ್ಲವೂ ಇದಕ್ಕೆ ಒತ್ತಾಸೆ ನೀಡುವಂತಿವೆ.

ಧನಿಕರೂ, ಸುಶಿಕ್ಷಿತರೂ ಆದವರ ಮನೆಗಳಲ್ಲೂ ಮಹಿಳೆಯರು ಅನೇಕ ಕಷ್ಟಗಳನ್ನು ಎದುರಿಸುತ್ತಾರೆ. ಯೂರೋಪ್ ಸೇರಿದಂತೆ ಮುಂದುವರೆದ ದೇಶಗಳಲ್ಲೂ ತಮ್ಮ ಹೆಂಡತಿಯರ ಮೇಲೆ ಕೈಮಾಡುವ ಗಂಡಂದಿರ, ಗಂಡನಿಂದ ದೈಹಿಕ ಮಾನಸಿಕ ಹಿಂಸೆಗೊಳಗಾದ ಹೆಂಡತಿಯರ ಅನೇಕ ಪ್ರಸಂಗಗಳನ್ನು ಅಲ್ಲಿನ ಪತ್ರಿಕೆಗಳು ವರದಿ ಮಾಡಿವೆ. ಇದರ ಜೊತೆಗೆ ಅತಿಯಾದ ಪ್ರಾಪಂಚಿಕತೆಯಿಂದ ಬಂದಿರುವ ವ್ಯಭಿಚಾರ, ಅನೈತಿಕತೆಗಳ ಫಲವಾಗಿ, ವಿವಾಹವಿಚ್ಛೇದನೆಗಳು ಸರ್ವೇಸಾಮಾನ್ಯವಾಗಿವೆ. ಇವೆಲ್ಲ ಬದಲಾಗುತ್ತಿರುವ ಪರಿಸ್ಥಿತಿಗೆ ಹೊಂದಿಕೊಳ್ಳಲು ಮನುಷ್ಯ ನಡೆಸುತ್ತಿರುವ ಹೋರಾಟ

ಸಂಸಾರ ಎಂದರೆ ಗಂಡ-ಹೆಂಡತಿ, ತಂದೆ-ತಾಯಿ, ಅಣ್ಣ-ತಮ್ಮ ಇತ್ಯಾದಿ. ಸಂಸಾರವು ಸಮಾಜಕ್ಕೆ ತಳಹದಿ. ಈಗಿನ ಕಾಲದ ಆರ್ಥಿಕ ಪರಿಸ್ಥಿತಿಯಿಂದಲೂ, ವ್ಯಕ್ತಿಸ್ವಾತಂತ್ರ್ಯಕ್ಕೆ ಅತಿಯಾದ ಮಹತ್ವವು ಬಂದಿರುವುದರಿಂದಲೂ, ಸಂಸಾರದಲ್ಲಿ ವಿಧೇಯತೆ, ಒಗ್ಗಟ್ಟು, ವಿಶ್ವಾಸ, ಸ್ನೇಹ ಮುಂತಾದ ಗುಣಗಳು ಕಡಿಮೆಯಾಗುತ್ತಾ ಬಂದಿವೆ. ಪ್ರೀತಿ-ವಿಶ್ವಾಸಗಳಿಲ್ಲದ ಸಂಸಾರ ಎಂತಹ ಸಂಸಾರ? ಅದು ಮರಳುಗಾಡು, ಕುರುಕ್ಷೇತ್ರ. ಜೊತೆಯಲ್ಲಿರಬೇಕಾದವರು ಅಹಿತರಾದರೆ, 'ಕಾಲಿನಲ್ಲಿ' ಮುಳ್ಳುಮುರಿದುಕೊಂಡ ಹಾಗೆ; ತೆಗೆದರೆ ಗಾಯ, ತೆಗೆಯದಿದ್ದರೆ ನೋವು, ಯಾವ ಕೆಲಸದ ಮೇಲಿದ್ದರೂ ನೋವಿನ ಮೇಲೇ ಜ್ಞಾನ. ಇದಿಲ್ಲದಾಗಬೇಕಾದರೆ ಪ್ರತಿಯೊಬ್ಬರಲ್ಲೂ ತ್ಯಾಗಬುದ್ಧಿ ಬರಬೇಕು. — **ಎ.ಆರ್. ಕೃಷ್ಣಶಾಸ್ತ್ರೀ (ವಚನ ಭಾರತ)**

ಎಂದು ಕೆಲವರು ವ್ಯಾಖ್ಯಾನಿಸಬಹುದು. ಆದರೆ ನೈಜ ಸ್ಥಿತಿಯನ್ನು ಒಪ್ಪಿಕೊಳ್ಳಲೇಬೇಕು. ಆರ್ಥಿಕ ವಲಯದಲ್ಲಿ ಅಸಾಧ್ಯವಾದ ಬೆಳವಣಿಗೆಯನ್ನು ಮಾನವ ಸಾಧಿಸಿದ್ದಾನೆ. ಆದರೆ ಅದರ ಜೊತೆಜೊತೆಗೇ ನೈತಿಕ ಮೌಲ್ಯಗಳಿಗೆ ಪ್ರಾಶಸ್ತ್ಯ ನೀಡದಿದ್ದರೆ ಸ್ತ್ರೀಯರ ಸಮಸ್ಯೆಗಳು ಬಗೆಹರಿಯುವಂತೆ ಕಾಣು ವುದಿಲ್ಲ. ದೇವಿಯರ ಪೂಜೆಯನ್ನು ಗುಡಿಗಳಲ್ಲಿ ಮಾಡುತ್ತಲೇ, ಮನೆಯಲ್ಲಿ ನಿತ್ಯವೂ ಕುಡಿದ ಅಮಲಿನಲ್ಲಿ ಸ್ತ್ರೀಯರನ್ನು ಹೊಡೆಯುವ ಪುರುಷರಿಗೆ, ವರದಕ್ಷಿಣೆ ತರಲಿಲ್ಲವೆಂದು ಕಿರುಕುಳ ಕೊಡುವ ಅತ್ತೆಯರಿಗೆ, ಸಹೋದರಿಯರನ್ನು ಅಮಾನವೀಯವಾಗಿ ಕಾಣುವ ಅಣ್ಣಂದಿರಿಗೆ, ರಸ್ತೆಯಲ್ಲಿ ಕೆಟ್ಟ ಮಾತುಗಳಿಂದ ಸ್ತ್ರೀಯರನ್ನು ನಿಂದಿಸಿ, ಲೇವಡಿ ಮಾಡುವ ಯುವಕರಿಗೆ ತಿಳುವಳಿಕೆ ಎಂದು ಮೂಡುವುದೋ! ಕೇವಲ ಕಾನೂನಿನ ಭಯದಿಂದ ಈ ಕೆಟ್ಟ ನಡತೆಗಳನ್ನು ತಡೆ ಹಿಡಿಯುವುದು ಸಾಧ್ಯವಿಲ್ಲ. ವ್ಯಾಪಕವಾದ ನೈತಿಕ ಮೌಲ್ಯ ಗಳು ಶಿಕ್ಷಣದ ವ್ಯವಸ್ಥೆಯಲ್ಲಿ ಅಳವಡಬೇಕು. ಸ್ತ್ರೀಯರನ್ನು ಕೇವಲ ಪ್ರದರ್ಶನದ ವಸ್ತುಗಳು ಎಂದು ಬಿಂಬಿಸುವ ಜಾಹಿರಾತುಗಳು, ಸಾಹಿತ್ಯವನ್ನು ತೆಗೆದುಹಾಕಿ ಅವರಿಗೆ ಎಲ್ಲ ಗೌರವಗಳು, ಭದ್ರತೆಗಳು, ಸೌಲಭ್ಯಗಳು ದೊರೆಯುವಂತೆ ನಮ್ಮ ಸಾಮಾಜಿಕ ವ್ಯವಸ್ಥೆ ಪ್ರಯತ್ನಿಸಬೇಕು. ಹಾಗಾಗದಿದ್ದಲ್ಲಿ ಇಂದಲ್ಲ ನಾಳೆ ಈ ಸೌಮ್ಯಮೂರ್ತಿಯ ಜಾಗದಲ್ಲಿ ರುದ್ರ ಕಾಳಿ, ಚಂಡಿ, ಚಾಮುಂಡಿಯರು ಪ್ರತ್ಯಕ್ಷವಾಗಿ ಪುರುಷ ರಾಕ್ಷಸರನ್ನು ಸದೆಬಡೆಯುವುದರಲ್ಲಿ ಸಂದೇಹವಿಲ್ಲ.

ಪಾಲನೆ, ಪೋಷಣೆಯೊಂದಿಗೆ ಶಿಕ್ಷಣ ನೀಡುವ ಮೊದಲ ಗುರು ತಾಯಿ. ಮಾತು, ಮಂತ್ರಗಳ ಮೂಲಕ ಗೌರವ ತೋರಿಸಿದರೆ ಅವಳು ತೃಪ್ತಳಾಗುವುದಿಲ್ಲ. ನಡವಳಿಕೆಯಿಂದ, ಕೃತಿಗಳಿಂದ ನಮ್ಮ ಗೌರವವನ್ನು ವ್ಯಕ್ತಪಡಿಸೋಣ. ನವ ರಾತ್ರಿಯ ಶುಭದಿನಗಳಲ್ಲಿ ದೇವಿಯ ಆರಾಧನೆಯೊಂದಿಗೆ ಜೀವಂತ ದೇವಿಯರಿಗೆ ಸಲ್ಲಬೇಕಾದ ಹಕ್ಕು, ಸೌಕರ್ಯಗಳನ್ನು ನೀಡಿ ಜೀವನದ ಪಥದಲ್ಲಿ ಸಮನಾಗಿ ಮುಂದುವರಿಯುವ ಪಣ ತೊಡೋಣ. ಎಲ್ಲರಲ್ಲಿಯೂ ಶಕ್ತಿಯಾಗಿ, ಪ್ರೇಮವಾಗಿ, ತಾಯಿಯಾಗಿ ಅಡಗಿರುವ ಆ ಜಗನ್ಮಾತೆ ಜಾಗೃತಳಾಗಿ ವಿಜೃಂಭಿಸಲಿ. ನಮ್ಮಲ್ಲಿರುವ ನೀಚತನ, ಸ್ವಾರ್ಥ, ಭಯಗಳನ್ನು ದೂರ ಮಾಡುವ ಉಜ್ವಲ ಭಾರತ ರೂಪುಗೊಳ್ಳಲಿ.

*

### ಹಿಮಾಲಯದ ರುದ್ರರಮಣೀಯತೆ

ಶ್ರೀರಾಮಕೃಷ್ಣರ ದೇಹಾವಸಾನವಾದ ಮೇಲೆ ಸ್ವಾಮಿ ಅಖಂಡಾನಂದರು ಹಿಮಾಲಯದಲ್ಲಿ ದೀರ್ಘಕಾಲ ತಪಸ್ಸನ್ನಾಚರಿಸಿದರು. ಆ ದಿನಗಳನ್ನು ಸ್ಮರಿಸುತ್ತ ಹೇಳುತ್ತಿದ್ದರು: 'ಒಮ್ಮೆ, ಹಿಮಾಲಯದಲ್ಲಿ ಸಂಚರಿಸುತ್ತಿದ್ದಾಗ ಏಕಾಂತ ಪ್ರದೇಶದಲ್ಲಿ ಒಂದು ಗುಡಿಸಲನ್ನು ಕಂಡೆ. ಬಳಿಯಲ್ಲೇ ಹೊಳೆಯೂ ಹರಿಯುತ್ತಿತ್ತು. ಇದು ಧ್ಯಾನಕ್ಕೆ ಅತ್ಯಂತ ಪ್ರಶಸ್ತವಾದ ಸ್ಥಳವೆಂದು ಅಲ್ಲೇ ಕುಳಿತೆ. ದೂರದಲ್ಲಿದ್ದ ಕುರುಬ ಹುಡುಗರು ನನ್ನನ್ನು ಕಂಡು ಬಳಿಬಂದರು. 'ಇಲ್ಲಿ ಕಾಡುಪ್ರಾಣಿಗಳಿವೆ. ನೀವು ನಮ್ಮ ಹಳ್ಳಿಗೆ ಬರಬೇಕು' ಎಂದು ಒತ್ತಾಯ ಮಾಡಿ ಕರೆದುಕೊಂಡು ಹೊರಟರು. ಹಳ್ಳಿಯಲ್ಲಿ ನನಗಾಗಿ ಕೋಣೆಯನ್ನು ಸಿದ್ಧಪಡಿಸಿ, ಛಳಿಯಾಗದಿರಲೆಂದು ಬೆಂಕಿಯನ್ನೂ ಹಚ್ಚಿಟ್ಟರು. ಆ ನಿರ್ಜನ ಪ್ರದೇಶವೇ ಉತ್ತಮ, ಭಗವಂತನಲ್ಲಿ ಶರಣಾಗತ ನಾಗಿರುವಾಗ ಭಯವೇಕೆ ಎಂಬ ಭಾವನೆಯಿಂದ ನಾನು ಅವರಿಗೆ ತಿಳಿಸದೆ ಮತ್ತೆ ಆ ಕಾಡಿನ ಪ್ರದೇಶಕ್ಕೇ ಬಂದು ಧ್ಯಾನಕ್ಕೆ ಕುಳಿತೆ. ಯಾವ ತೊಂದರೆಯೂ ಆಗಲಿಲ್ಲ, ಗಾಢವಾದ ಧ್ಯಾನದಲ್ಲಿ ಇಡೀ ರಾತ್ರಿಯೇ ಕಳೆಯಿತು. ಬಹಳ ಸಮಯದ ನಂತರ ಶ್ರೀರಾಮಕೃಷ್ಣರು ನನ್ನ ಹಿಂದೆ ನಿಂತಿರುವುದು ನನಗೆ ಅನುಭವವಾಯಿತು. ಜೀವಂತ 'ಹಿಮಾಲಯ'. ಹಿಮಾಲಯದ ಅಂತಸ್ಸತ್ವವನ್ನೇ ನನಗೆ ತೋರಿದರು—ಶಿವನ ಎದೆಯ ಮೇಲೆ ನರ್ತಿಸುತ್ತಿರುವ ಕಾಳಿಯ ದರ್ಶನವಾಯಿತು. ಶ್ರೀರಾಮಕೃಷ್ಣರು ಮೆಲ್ಲನೆ ಈ ಸಾಲುಗಳನ್ನು ಹಾಡುತ್ತಿದ್ದುದು ಕೇಳಿಸಿತು:

**ಓ ಉನ್ಮತ್ತ ರಮಣಿ, ನರ್ತಿಸುವೆಯಾದರೆ ಇಳಿದು ಬಾ,**
**ಮುರಿವುದು ಶಿವನ ಎದೆ, ಮಾಡದಿರು ಕೋಪ**
**ಧ್ಯಾನದಲ್ಲಿ ತಲ್ಲೀನ ಮೃತನಲ್ಲ ಶಿವ!**